# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1644 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.03.2022 |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು<br>ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಡಚಾದ್ರಿಯಲ್ಲಿ ಶುಲ್ಕ ಪರಿಷ್ಕರಣೆಯ ಸಕ್ಷಮ ಪ್ರಾಧಿಕಾರ ಯಾವುದು; ಕೊಡಚಾದ್ರಿ ಶುಲ್ಕ ಪರಿಷ್ಕರಣೆ ಮಾಡಲಾಗಿದೆಯೇ; (ಆದೇಶದ ಪ್ರತಿಯನ್ನು ಒದಗಿಸುವುದು) ಶುಲ್ಕ ಪರಿಷ್ಕರಣೆಯ ಪೂರ್ವ ಮತ್ತು ನಂತರ ವಿಧಿಸಲಾದ ಮೊತ್ತ ಎಷ್ಟು; ಪಟ್ಟಿಯನ್ನು ಒದಗಿಸುವುದು) ಮೂರರಿಂದ ನಾಲ್ಕು ಪಟ್ಟು ಶುಲ್ಕ ಪರಿಷ್ಕರಣೆ ಯಾಗಿರುವುದನ್ನು ಸರ್ಕಾರ ಗಮನಿಸಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಿನಾಂಕ: 01.04.2021 ರಿಂದ ಅನ್ವಯವಾಗುವಂತೆ, ಕೊಡಚಾದ್ರಿ ಚಾರಣದ ಶುಲ್ಕವನ್ನು ಈ ಕೆಳಕಂಡಂತೆ ಪರಿಷ್ಕರಣೆ ಮಾಡಲಾಗಿರುತ್ತದೆ.<br><br>(ರೂ.ಗಳಲ್ಲಿ)
<table>
<tr><th colspan="2">ಶುಲ್ಕದ ವಿವರ</th><th colspan="2">ಪರಿಷ್ಕರಣೆಯ ಪೂರ್ವ ಶುಲ್ಕ</th><th colspan="2">ಪರಿಷ್ಕರಣೆಯ ನಂತರದ ಶುಲ್ಕ</th></tr>
<tr><td rowspan="3">1</td><td rowspan="3">ಪ್ರವೇಶ ಶುಲ್ಕ</td><td>ಭಾರತೀಯರಿಗೆ</td><td>25/-</td><td>ಭಾರತೀಯರಿಗೆ</td><td>100/-</td></tr>
<tr><td rowspan="2">ಮಕ್ಕಳಿಗೆ</td><td rowspan="2">10/-</td><td>ವಿದೇಶಿಯರಿಗೆ</td><td>400/-</td></tr>
<tr><td>ಮಕ್ಕಳಿಗೆ</td><td>50/-</td></tr>
<tr><td>2</td><td>ಚಾರಣ ಶುಲ್ಕ</td><td colspan="2">200/-</td><td colspan="2">300/-</td></tr>
<tr><td rowspan="3">3</td><td rowspan="3">ಕೊಡಚಾದ್ರಿಗೆ ವಾಹನ ಮೂಲಕ ಪ್ರವೇಶ ಶುಲ್ಕ (ಕಟ್ಟಿನ ಹೊಳೆ ಮುಖಾಂತರ)</td><td>ಭಾರತೀಯರಿಗೆ</td><td>25/-</td><td>ಭಾರತೀಯರಿಗೆ</td><td>100/-</td></tr>
<tr><td rowspan="2">ಮಕ್ಕಳಿಗೆ -</td><td rowspan="2">10/-</td><td>ವಿದೇಶಿಯರಿಗೆ</td><td>400/-</td></tr>
<tr><td>ಮಕ್ಕಳಿಗೆ</td><td>25/-</td></tr>
</table>
</td></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಕೊಡಚಾದ್ರಿಯಲ್ಲಿ ಸಂಗ್ರಹಿಸಲಾದ ಶುಲ್ಕದ ಮೊತ್ತವೆಷ್ಟು; (ವರ್ಷವಾರು ಮಾಹಿತಿ ನೀಡುವುದು) ಈ ನಿಧಿಯನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗುತ್ತಿದೆ; ವೆಚ್ಚ ಶೀರ್ಷಿಕೆವಾರು ವಿವರ ನೀಡುವುದು;</td><td>ಕಳೆದ ಮೂರು ವರ್ಷಗಳಲ್ಲಿ ಕೊಡಚಾದ್ರಿ ಚಾರಣದಿಂದ ಸಂಗ್ರಹಗೊಂಡ ವಿವಿಧ ಶುಲ್ಕಗಳ ಮೊತ್ತ ಈ ಕೆಳಕಾಣಿಸಿದಂತಿರುತ್ತದೆ.
<table>
<tr><th>ವರ್ಷ</th><th>ರಕ್ಷಿತಾರಣ್ಯದ ಅಭಿವೃದ್ಧಿ ಉದ್ದೇಶಕ್ಕಾಗಿ ಹುಲಿ ಯೋಜನ ಪ್ರತಿಷ್ಠಾನ- ಭದ್ರಾಕ್ಕೆ ಜಮ ಮಾಡಿದ ಶುಲ್ಕ</th><th>ಸ್ಥಳೀಯ ಅಭಿವೃದ್ಧಿ ಉದ್ದೇಶಕ್ಕಾಗಿ ಕಟ್ಟಿನಹೊಳೆ ಪರಿಸರ ಅಭಿವೃದ್ಧಿ ಸಮಿತಿಗೆ ಜಮ ಶುಲ್ಕ</th><th>ಕೊಡಚಾದ್ರಿಯಲ್ಲಿ ಸಂಗ್ರಹಿಸಿದ ವಿವಿಧ ಶುಲ್ಕಗಳ ಒಟ್ಟು ಮೊತ್ತ</th></tr>
<tr><td>2018-19</td><td>3990100/-</td><td>2322743/-</td><td>6312843/-</td></tr>
<tr><td>2019-20</td><td>4931295/-</td><td>2848421/-</td><td>7779716/-</td></tr>
<tr><td>2020-21</td><td>1762525/-</td><td>1115928/-</td><td>2878453/-</td></tr>
<tr><td>2021-22 (ಫೆಬ್ರುವರಿ-2022ರ ಅಂತ್ಯದ ವರೆಗೆ</td><td>7228793/-</td><td>1131400/-</td><td>8360193/-</td></tr>
</table>
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಸಂಗ್ರಹಿಸಿದ ಮೊತ್ತವನ್ನು ಭದ್ರಾ ಹುಲಿ ಸಂರಕ್ಷಣಾ ಪ್ರತಿಷ್ಠಾನದ ಮೂಲಕ ರಕ್ಷಿತಾರಣ್ಯದ ಅಭಿವೃದ್ಧಿ ಹಾಗೂ ಸ್ಥಳೀಯ ಅಭಿವೃದ್ಧಿ ಉದ್ದೇಶಗಳಿಗಾಗಿ ಕಟ್ಟಿನಹೊಳೆ ಪರಿಸರ ಅಭಿವೃದ್ಧಿ ಸಮಿತಿಗೆ ಜಮ ಮಾಡಲಾಗುತ್ತಿದೆ.<br><br>ಕುದುರೆಮುಖ ವನ್ಯಜೀವಿ ವಿಭಾಗದ ಮೂರು ರಕ್ಷಿತಾರಣ್ಯಗಳಲ್ಲಿ ವಿವಿಧ ಶುಲ್ಕಗಳ ಮೂಲಕ ಸಂಗ್ರಹವಾಗುವ ಆದಾಯವನ್ನು ರಕ್ಷಿತಾರಣ್ಯದ ಅಭಿವೃದ್ಧಿ ಉದ್ದೇಶಕ್ಕಾಗಿ ಭದ್ರಾ ಹುಲಿ ಸಂರಕ್ಷಣಾ ಪ್ರತಿಷ್ಠಾನಕ್ಕೆ ಜಮ ಮಾಡಲಾಗುತ್ತಿದ್ದು ಈ ಆದಾಯದಡಿ 2018-19 ರಲ್ಲಿ ಯಾವುದೇ ವೆಚ್ಚ ಮಾಡಿರುವುದಿಲ್ಲ. ಕಳೆದ ಎರಡು ವರ್ಷಗಳಲ್ಲಿ ಕುದುರೆಮುಖ ವನ್ಯಜೀವಿ, ಕಾರ್ಕಳ ವಿಭಾಗದ ವಿವಿಧ ವಲಯಗಳಲ್ಲಿ ಗಸ್ತುಪಥ ನಿರ್ವಹಣೆ, ಚಾರಣಪಥ ನಿರ್ವಹಣೆ, ಕೆರೆ ನಿರ್ವಹಣೆ, ಸೂಚನಾ ಫಲಕಗಳ ಅಳವಡಿಕೆ ಮತ್ತು ನಿರ್ವಹಣೆ, ಆರ್ಕಿಡೇರಿಯಂ ಅಭಿವೃದ್ಧಿ, ವಾಹನ ನಿರ್ವಹಣೆ, ಕಚೇರಿ ವೆಚ್ಚ, ಕಟ್ಟಿನಹೊಳೆ ಶೌಚಾಲಯ ನಿರ್ಮಾಣ, ಅರಣ್ಯದಂಚಿನ ಗ್ರಾಮಸ್ಥರಿಗೆ ವೈದ್ಯಕೀಯ ಶಿಬಿರ, ದಿನಗೂಲಿ ನೌಕರರ ವೇತನ ಪಾವತಿ, ಮಂಚೂಣಿ ಸಿಬ್ಬಂದಿಗಳಿಗೆ ವಿಮೆ, ವನ್ಯಜೀವಿ ಸಪ್ತಾಹ ಆಚರಣೆ, ಪೀಠೋಪಕರಣ ಖರೀದಿಗಳಿಗೆ ವೆಚ್ಚ ಭರಿಸಲಾಗಿದೆ. 2019-20 ರಲ್ಲಿ ರೂ.48.93 ಲಕ್ಷ, ಮತ್ತು 2020-21ರಲ್ಲಿ ರೂ.67.15 ಲಕ್ಷ, ವೆಚ್ಚ ಭರಿಸಲಾಗಿದೆ. ಮತ್ತು 2021-22ರಲ್ಲಿ ರೂ55.70ಲಕ್ಷ ವೆಚ್ಚ ಭರಿಸಲಾಗಿದೆ.<br><br>ಸ್ಥಳೀಯ ಅಭಿವೃದ್ಧಿ ಉದ್ದೇಶಕ್ಕಾಗಿ ಕಟ್ಟಿನಹೊಳೆ ಪರಿಸರ ಅಭಿವೃದ್ಧಿ ಸಮಿತಿಗೆ ಜಮ ಮಾಡಿದ ಆದಾಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಗ್ರಾಮಸ್ಥರಿಗೆ ಸೋಲಾರ್ ದೀಪ ವಿತರಣೆ, ಗ್ರಾಮಸ್ಥರಿಗೆ ಸೋಲಾರ್ ವಾಟರ್ ಹೀಟರ್, ಸೋಲಾರ್ ಬೀದಿ ದೀಪ, ಕೊಡಚಾದ್ರಿ ಮಣ್ಣು ರಸ್ತೆ ನಿರ್ವಹಣೆ, ಸ್ಥಳೀಯ ಜನರಿಗೆ ಉದ್ಯೋಗ, ಕಛೇರಿ ವೆಚ್ಚ, ಗ್ರಾಮದ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ವಾಹನ, ಸಮವಸ್ತ್ರ, ಪುಸ್ತಕ, ಬ್ಯಾಗ್ ವಿತರಣೆ, ಸ್ಥಳೀಯ ದೇವಸ್ಥಾನಕ್ಕೆ ಧನ ಸಹಾಯ, ಸ್ಥಳೀಯ ಸಂಘ ಸಂಸ್ಥೆಗಳಿಗೆ ಧನ ಸಹಾಯ, ಸಮಿತಿ ವ್ಯಾಪ್ತಿಯ ಸ್ಥಳೀಯರಿಗೆ ವೈದ್ಯಕೀಯ ವೆಚ್ಚ, ಕಳ್ಳಬೇಟೆ ತಡೆ ಶಿಬಿರದ ನಿರ್ವಹಣೆ, ವಾಹನ ವೆಚ್ಚ, ಸಿಬ್ಬಂದಿಗಳ ಸೌಲಭ್ಯಗಳು, ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್ ವ್ಯವಸ್ಥೆ, ವನ್ಯಜೀವಿ ಸಪ್ತಾಹ ಆಚರಣೆ, ಅಣಬೆ ಕೃಷಿ ತರಬೇತಿ, ಅಡಿಕೆ ಸುಲಿಯುವ ಯಂತ್ರ, ಅಡಿಕೆ ಮರ ಹತ್ತುವ ಯಂತ್ರ, ಮುಂತಾದ ಸ್ಥಳೀಯ ಜನರಿಗೆ ಪ್ರಯೋಜನವಾಗುವಂತಹ ಕಾಮಗಾರಿಗಳಿಗೆ ವೆಚ್ಚ ಭರಿಸಲಾಗಿದೆ. 2018-19ನೇ ಸಾಲಿನಲ್ಲಿ ರೂ.23/- ಲಕ್ಷ, 2019-20ರಲ್ಲಿ ರೂ.17.38 ಲಕ್ಷ, 2020-21 ರಲ್ಲಿ ರೂ.17.25 ಲಕ್ಷ ಮತ್ತು 2021-22ರಲ್ಲಿ ರೂ.12.50 ಲಕ್ಷ (ಫೆಬ್ರವರಿ-2022ರ ಅಂತ್ಯಕ್ಕೆ), ವೆಚ್ಚ ಭರಿಸಲಾಗಿದೆ |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಇ) | ಕೊಲ್ಲೂರು ಮತ್ತು ಕೊಡಚಾದ್ರಿ ರೋಪ್ ವೇ ನಿರ್ಮಾಣ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಡಿಪಿಆರ್ ತಯಾರಿಸಲಾಗಿದೆಯೇ; (ಪ್ರತಿ ಒದಗಿಸುವುದು) ಈ ಯೋಜನೆಯ ಅಂದಾಜು ವೆಚ್ಚವೆಷ್ಟು; ಕೊಡಚಾದ್ರಿಯಲ್ಲಿ ಈಗ ಇರುವ ಮೂಲ ಸೌಕರ್ಯಗಳು ಯಾವುವು; ರಸ್ತೆ, ಮೆಟ್ಟಿಲು, ಹ್ಯಾಂಡ್ ಗ್ರಿಲ್ಸ್ ಶೌಚಾಲಯಗಳಂತಹ ಮೂಲ ಅಗತ್ಯತೆಯನ್ನು ಕಲ್ಪಿಸಲಾಗಿದೆಯೇ; ಶಾಶ್ವತ ರೀತಿಯಲ್ಲಿ ಅಭಿವೃದ್ಧಿ ಕಲ್ಪಿಸಲು ಸಲ್ಲಿಸಿದ ಪ್ರಸ್ತಾವನೆಯ ಮುಖ್ಯಾಂಶಗಳು ಯಾವುವು; ಪ್ರಸ್ತಾವನೆಯು ಯಾವ ಹಂತದಲ್ಲಿದೆ; (ಹಂತವಾರು ಮಾಹಿತಿ ನೀಡುವುದು) | ಕೊಲ್ಲೂರು ಮತ್ತು ಕೊಡಚಾದ್ರಿ ರೋಪ್ವೇ ನಿರ್ಮಾಣ ಪ್ರಸ್ತಾವನೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ಉಡುಪಿ ಇವರು ಈ ಕಚೇರಿಗೆ ಸಲ್ಲಿಸಿದ ಪ್ರಸ್ತಾವನೆ ಮೇರೆಗೆ ದಿನಾಂಕ: 05-02-2021ರಂದು ಸರ್ವೆ ಕಾರ್ಯಕ್ಕೆ ಮಾತ್ರ ಅನುಮತಿ ನೀಡಲಾಗಿದೆ.<br><br>ಮುಂದುವರೆದು ಕಟ್ಟಿನಹೊಳೆ ಕೊಡಚಾದ್ರಿ ನಡುವೆ ಕಾಂಕ್ರೀಟ್ ರಸ್ತೆ ನಿರ್ಮಿಸುವ ಪ್ರಸ್ತಾವನೆ ಸಂಖ್ಯೆ FP/ROAD/42755/2019 ರಂತೆ ಉಪಯೋಗಿ ಸಂಸ್ಥೆಯಾದ ಕೆ.ಆರ್.ಇ.ಡಿ.ಎಲ್. ಶಿವಮೊಗ್ಗ ಇವರು "ಪರಿವೇಶ್" ಪೋರ್ಟಲ್ ನಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>**<u>ಪ್ರವಾಸೋದ್ಯಮ ಇಲಾಖೆಯ ಉತ್ತರ</u>**<br><br>ಕೊಡಚಾದ್ರಿ ಬೆಟ್ಟದಲ್ಲಿ ರೋಪ್-ವೇ ಅಳವಡಿಸುವ ಯೋಜನೆಗೆ ಮೆ\|\|(iDeCK) ಸಂಸ್ಥೆಯಿಂದ Transaction Advisory ಮತ್ತು PMC ಸೇವೆಯನ್ನು ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಪ್ರವಾಸೋದ್ಯಮ ಇಲಾಖೆಗೆ ಕಾಯ್ದೆಯಿಂದ ಆರ್ಥಿಕ ಇಲಾಖೆಯ ಅಧಿಸೂಚನೆಯಲ್ಲಿ ವಿನಾಯಿತಿ ನೀಡಲಾಗಿದೆ.<br><br>ಪ್ರವಾಸೋದ್ಯಮ ಇಲಾಖೆಯು ಮೆ: ಐಡೆಕ್ (iDeCK) ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿ ಕೊಳ್ಳಲಾಗಿರುತ್ತದೆ. ಸದರಿ ಸಂಸ್ಥೆಯವರಿಂದ ಡಿ.ಪಿ.ಆರ್. ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದುದರಿಂದ ಅಂದಾಜು ಮೊತ್ತವನ್ನು ಖಚಿತಪಡಿಸಿರುವುದಿಲ್ಲ. |
| | | ಪ್ರವಾಸೋದ್ಯಮ ಇಲಾಖೆಯಿಂದ 2007-08ನೇ ಸಾಲಿನಲ್ಲಿ ಕೊಡಚಾದ್ರಿ ಬೆಟ್ಟದ ತಪ್ಪಲಿನಲ್ಲಿ ನಾಗೋಡಿ ಗ್ರಾಮದ (ಗೌರಿಕೆರೆ) ಸರ್ವೆ ನಂ.297/1ಎ/ಎ2 ರಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸೇರಿದ 10 ಎಕರೆ ಜಮೀನಿನಲ್ಲಿ ಡಾರ್ಮಿಟರಿ ಬ್ಲಾಕ್ ಕೊಠಡಿಗಳು, ಸಭಾಂಗಣ, ಒಳಾಂಗಣ ಆಟದ ಸೌಲಭ್ಯಗಳು, ಲ್ಯಾಂಡ್ ಸ್ಕೇಪಿಂಗ್, ಪಾರ್ಕಿಂಗ್ ಸೌಲಭ್ಯಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಸೌಲಭ್ಯವನ್ನು ಕೆ.ಎಸ್.ಟಿ.ಡಿ.ಸಿ. ಸಂಸ್ಥೆಯಿಂದ ನಿರ್ವಹಿಸಿರುತ್ತಾರೆ.<br><br>ಕಟ್ಟಿನಹೊಳೆಯಿಂದ ಕೊಡಚಾದ್ರಿ ಬೆಟ್ಟದ ತುದಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಈ ರೋಪ್ ವೇ ನಿರ್ಮಾಣದ ಪ್ರಸ್ತಾವನೆಯ ಉದ್ದೇಶವೇನು; ಈ ರೋಪ್ ವೇ ಯಿಂದ ಪ್ರವಾಸಿಗರಿಗೆ ಆಕರ್ಷಣೆಯಾಗುವುದರಿಂದ, ಭೂ ಮೌಲ್ಯ ಮತ್ತು ವಾಣಿಜ್ಯ ಚಟುವಟಿಕೆಗಳಾದ ಹೋಂ ಸ್ಟೇ ಮತ್ತ್ ರೆಸಾಟಸ್ಸ್ ನಿರ್ಮಾಣಕ್ಕೆ ಪೂರಕ ವಾತಾವರಣ ಸೃಷ್ಟಿಯಾಗುವುದನ್ನು ಸರ್ಕಾರ ಗಮನಿಸಿದೆಯೇ? | <u>ಪ್ರವಾಸೋದ್ಯಮ ಇಲಾಖೆಯ ಉತ್ತರ</u><br><br>ಕೊಡಚಾದ್ರಿ ಬೆಟ್ಟದಲ್ಲಿ ರೋಪ್-ವೇ ಅನ್ನು ನಿರ್ಮಿಸಿ ಪ್ರಯಾಣಿಕರು ಬೆಟ್ಟ ತಲುಪುವ ವ್ಯವಸ್ಥೆ ಕಲ್ಪಿಸುವ ಉದ್ದೇಶ ಹೊಂದಿದೆ. ರೂಮ್-ವೇ ಒಂದು ಅತ್ಯಂತ ವೇಗ ಹಾಗೂ ಪರಿಸರ ಸ್ನೇಹಿ ಪ್ರಯಾಣ ವ್ಯವಸ್ಥೆಯಾಗಿದ್ದು, ಅತ್ಯಂತ ಕಡಿಮ ಅವಧಿಯಲ್ಲಿ ಯಾವುದೇ ಪರಿಸರ ಮಾಲಿನ್ಯವಿಲ್ಲದೆ ಗಿರಿಧಾಮದ ವಿಹಂಗಮ ವೈಮಾನಿಕ ನೋಟವನ್ನು ಪ್ರವಾಸಿಗರು ಕಣ್ತುಂಬಿಕೊಳ್ಳಬಹುದಾಗಿರುತ್ತದೆ. ಇತರೆ ರಾಜ್ಯಗಳಲ್ಲಿ ರೂಪ್-ವೇ ಒಂದು ಪ್ರವಾಸಿ ಆಕರ್ಷಣೆ ಯಾಗಿದ್ದು, ಕೊಡಚಾದ್ರಿ ಬೆಟ್ಟವೂ ಸಹ ಅದೇ ರೀತಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಬಹುದಾಗಿರುತ್ತದೆ.<br><br>ಭೂಮೌಲ್ಯ ಮತ್ತು ವಾಣಿಜ್ಯ ಚಟುವಟಿಕೆಗಳಾದ ಹೊಂ-ಸ್ಟೇ ಮತ್ತು ರೆಸಾರ್ಟ್‌ಗಳ ನಿರ್ಮಾಣಕ್ಕೆ ಪೂರಕ ವಾತಾವರಣ ಸೃಷ್ಟಿಯ ಬಗ್ಗೆ ಕಾರ್ಯಸಾಧ್ಯತೆ ಅಧ್ಯಯನ ವರದಿಯನ್ನು ಮೆ: ಐಡೆಕ್ (iDeCK) ಸಂಸ್ಥೆಯವರು ಸಲ್ಲಿಸಿದ ನಂತರ ಪರಿಶೀಲಿಸಲಾಗುವುದು. |

ಸಂಖ್ಯೆ: ಅಪಜೀ 24 ಎಫ್ ಟಿಎಸ್ 2022

(ಉಮೇಶ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು